ಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

**ಸಿಸಿ ನಂ.245/2020**

ಚಾಸಾ-11 ಫ್ರಾಸಾ-04

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 12.02.2025

| | | |
|---|---|---|
| ಹೆಸರು | : | ಪವನಕುಮಾರ |
| ತಂದೆಯ ಹೆಸರು | : | ಹಣಮಂತರಾಯ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ದೇಸಾಯಿ ಕಲ್ಲೂರ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಚಾಸಾ-1,9 ಮತ್ತು 10 ರವರ ಪರಿಚಯ ಇರುತ್ತದೆ. ಮೃತ ಮಲ್ಲಪ್ಪ ರವರ ಪರಿಚಯ ಇರುತ್ತದೆ. ದಿಃ19.10.2019 ರಂದು ನಾನು ಅಫಜಲಪೂರಕ್ಕೆ ಬಂದಿರುತ್ತೇನೆ. ನಾನು ನಮ್ಮೂರಿಗೆ ಮರಳಿ ಹೋಗುತ್ತಿರುವಾಗ ಸಾಯಂಕಾಲ 07 ರಿಂದ 07.25 ಗಂಟೆ ಆಗಿರಬಹುದು, ನಮ್ಮೂರಿನ ದಾರಿಯಲ್ಲಿ ಇರುವ ನಿಶಾನೆ ಗಿಡದ ಹತ್ತಿರ ನಿಂತಿದ್ದಾಗ ಅಲ್ಲೇ ಮುಂದೆ ಮಕ್ಬೂದ ಅಲಿ ಎಂಬುವರ ಹೊಲದ ಹತ್ತಿರ ಅಪಘಾತವಾಗಿದೆ ಎಂದು ಹೇಳಿದ್ದರಿಂದ ನಾವು ಅಲ್ಲಿಗೆ ಹೋಗಿರುತ್ತೇವೆ. ಹೋಗಿ ನೋಡಿದಾಗ ಮೃತ ಮಲ್ಲಪ್ಪನಿಗೆ ಅಪಘಾತವಾಗಿತ್ತು, ಆತನ ಮೋಟಾರ ಸೈಕಲ Hero Passion Pro ಮಕ್ಬೂದ ಅಲಿ ರವರ ಹೊಲದ ಪಕ್ಕ ಮೋಟಾರ ಸೈಕಲನೊಂದಿಗೆ ನೆಲಕ್ಕೆ ಬಿದ್ದಿದ್ದನು, ಅದರ ಎದುರಿನ ದಿಕ್ಕಿಗೆ ಮತ್ತೊಂದು ಮೋಟಾರ ಸೈಕಲ ಬಿದಿತ್ತು, ಅಷ್ಟೊತ್ತಿಗೆ ಅಕ್ಕ-ಪಕ್ಕದ ಜನರು ಅಪಘಾತ ಸ್ಥಳಕ್ಕೆ ಬಂದಿರುತ್ತಾರೆ. ಅಪಘಾತ ಪಡಿಸಿದ ಮೋಟಾರ ಸೈಕಲ ಸವಾರನ ಹೆಸರು ಸಿಂಧೂರ ರಾಠೋಡ ಅಂತಾ ಇದ್ದು, ಆ ಮೋಟಾರ ಸೈಕಲ ಮೇಲೆ ಚಾಸಾ-8 ರವರು ಸಹ ಪ್ರಯಾಣಿಸುತ್ತಿದ್ದರು, ಅಪಘಾತದ ಪಡಿಸಿದ ಸಿಂಧೂರ ರಾಠೋಡ ಮತ್ತು ಚಾಸಾ-8 ರವರು ಗುನ್ಹೆ ಸ್ಥಳದಿಂದ ಓಡಿ ಹೋಗಿರುತ್ತಾರೆ.

ಆಗ ನಾನು ಚಾಸಾ-1 ರವರಿಗೆ ಸದರಿ ಅಪಘಾತದ ಕುರಿತು ದೂರವಾಣಿ ಕರೆಯ ಮೂಲಕ ತಿಳಿಸಿರುತ್ತೇನೆ. ಆ ನಂತರ ಚಾಸಾ-1 ಮತ್ತು ಆತನ ತಾಯಿ-ತಂದೆ, ಅಣ್ಣ-ತಮ್ಮಂದಿರು ಅಪಘಾತ ಸ್ಥಳಕ್ಕೆ ಬಂದಿರುತ್ತಾರೆ. ಆ ನಂತರ ಅವರುಗಳು ಮೃತ ಮಲ್ಲಪ್ಪನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ. ಅಪಘಾತದವಾದ ಮರು ದಿನ ಮೃತ ಮಲ್ಲಪ್ಪ ತೀರಿಕೊಂಡ ವಿಷಯ ಗೊತ್ತಾಗಿರುತ್ತದೆ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ11.10.2019 ರಂದು ನಾನು ಪೋಲಿಸರ ಮುಂದೆ ದಿಃ09.10.2019 ರಂದು ಆದ ಅಪಘಾತದಲ್ಲಿ ಮೃತ ಮಲ್ಲಪ್ಪನು ತೀರಿಕೊಂಡಿದ್ದು, ಸದ ಅಪಘಾತವು ಆರೋಪಿತನ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಸಾಕ್ಷಿಗೆ ಅಪಘಾತಕ್ಕೆ ಒಳಗಾದ ಮೋಟಾರ ಸೈಕಲಗಳ ಭಾವಚಿತ್ರವನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಭಾವಚಿತ್ರವನ್ನು ಈಗಾಗಲೇ ನಿಪಿ-**2** ರಿಂದ **8** ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **CSH** ವಕೀಲರಿಂದಃ-</u>

ಅಪಘಾತವಾದಾಗ ನಾನು ಗುನ್ನೆ ಸ್ಥಳದಲ್ಲಿ ಇರಲಿಲ್ಲಾ ಎಂದರೆ ಸಾಕ್ಷಿಯು ನಾನು ನಿಂತ ಸ್ಥಳದಿಂದ ಅಪಘಾತವಾಗದ ಸ್ಥಳವು ನೇರವಾಗಿ ಕಾಣಿಸುತ್ತದೆ ಎಂದು ನುಡಿಯುತ್ತಾರೆ. ನಾನು ನಿಂತ ಸ್ಥಳದಿಂದ 300 ರಿಂದ 500 ಫೀಟ್ ಅಂತರ ಇರಬಹುದು. ಗುನ್ನೆ ಸ್ಥಳವು ನಾನು ನಿಂತ ಸ್ಥಳದಿಂದ 300 ರಿಂದ 500 ಫೀಟ್ ಅಂತರ ಇರುವುದರಿಂದ ಯಾರ ತಪ್ಪಿನಿಂದ ಅಪಘಾತವಾಯಿತು ಎಂದು ನನಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ. ಅಪಘಾತವಾದಾಗ ಕತ್ತಲು ಇತ್ತು ಎಂದರೆ ಸರಿ. ಮೃತ ಮಲ್ಲಪ್ಪನು ನಮ್ಮ ಊರಿನವರು ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಆರೋಪಿತನಿಗು ಮತ್ತು ಅಪಘಾತಕ್ಕೂ ಯಾವುದೇ ಸಂಬಂಧ ಇರದೇ ಇದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಮಲ್ಲಪ್ಪನು ಆರೋಪಿತನಿಗೆ ಡಿಕ್ಕಿ ಪಡಿಸಿ ಮೃತ ಪಟ್ಟಿರುತ್ತಾನೆ ಎಂದು ಸೂಚಿಸುವುದು ಸರಿಯಲ್ಲ.

<u>ಮರು ವಿಚಾರಣೆಃ **- ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು

ಅಫಜಲಪೂರ

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

**ಸಿಸಿ ನಂ.245/2020**

ಚಾಸಾ-04 ಫ್ರಾಸಾ-03

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 12.02.2025

| | | |
|---|---|---|
| ಹೆಸರು | : | ರಾಜಕುಮಾರ |
| ತಂದೆಯ ಹೆಸರು | : | ಯಲ್ಲಪ್ಪ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ದೇಸಾಯಿ ಕಲ್ಲೂರ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಚಾಸಾ-1 ಮತ್ತು 5 ರವರ ಪರಿಚಯ ಇರುತ್ತದೆ. ಗುನ್ಹೆ ಸ್ಥಳದ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**13** ಮತ್ತು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-**13**(ಎ) ಎಂದು ಗುರುತಿಸಲಾಯಿತು.

ದಿಃ 11.10.2019 ರಂದು ದೇಸಾಯಿ ಕಲ್ಲೂರ ತಾಂಡಾದ ಹತ್ತಿರ ಗುನ್ಹೆ ಸ್ಥಳದಲ್ಲಿ ನನ್ನ ಹಾಗು ಚಾಸಾ-5 ರವರ ಸಮಕ್ಷಮ ಬೆಳಗ್ಗೆ 09.30 ರಿಂದ 10.30 ರ ವರೆಗೆ ಪಂಚನಾಮೆಯನ್ನು ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಮೋಟಾರ ಸೈಕಲಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ.

ಸಾಕ್ಷಿಗೆ ಗುನ್ಹೆ ಸ್ಥಳದ ಪಂಚನಾಮೆಯ ಭಾವಚಿತ್ರಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಭಾವಚಿತ್ರಗಳನ್ನು ನಿಪಿ-**14** ಮತ್ತು ನಿಪಿ-**15** ಎಂದು ಗುರುತಿಸಲಾಯಿತು.

ಜಪ್ತಿ ಪಡಿಸಿಕೊಂಡರು ಎಂದು ಹೇಳುವ ಮೋಟಾರ ಸೈಕಲನ ಭಾವಚಿತ್ರವನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಭಾವಚಿತ್ರವನ್ನು ಈಗಾಗಲೇ ನಿಪಿ-**6** ರಿಂದ **8** ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **CSH** ವಕೀಲರಿಂದಃ-</u>

ಅಪಘಾತ ಹೇಗೆ ಆಯಿತು ಎಂದು ಗೊತ್ತಿಲ್ಲಾ, ಪಂಚನಾಮೆಗೆ ಪೋಲಿಸರು ಕರೆದಿರುತ್ತಾರೆ ಎಂದರೆ ಸರಿ. ಅಪಘಾತವು ಎರಡು ಮೋಟಾರ ಸೈಕಲಗಳ ಮಧ್ಯ ಆಗಿರುತ್ತವೆ ಎಂದರೆ ಸರಿ. ಗುನ್ನೆ ಸ್ಥಳ ಪಂಚನಾಮೆಯ ಕಾಲಕ್ಕೆ ಗುನ್ನೆ ಸ್ಥಳದಲ್ಲಿ ಎರಡು ಮೋಟಾರ ಸೈಕಲಗಳು ಇದ್ದವು ಎಂದರೆ ಸರಿ. ಗುನ್ನೆ ಸ್ಥಳದಲ್ಲಿ ಒಂದು Splendor ಮತ್ತು ಒಂದು Shine ಗಾಡಿಗಳು ಇದ್ದವು ಎಂದರೆ ಸರಿ. ನಿಪಿ-13 ರಲ್ಲಿ ಬರೆದ ಸಂಗತಿಗಳು ಪೋಲಿಸರು ನನಗೆ ಓದಿ ಹೇಳಿಲ್ಲಾ ಎಂದರೆ ಸರಿ. ಕೇವಲ ಪೋಲಿಸರು ಸಹಿ ಮಾಡು ಅಂತಾ ಹೇಳಿದ್ದರಿಂದ ಸಹಿ ಮಾಡಿರುತ್ತೀರಾ ಎಂಬ ಪ್ರಶ್ನಗೆ ಸಾಕ್ಷಿಯು ಪಂಚನಾಮೆ ಮಾಡಿಕೊಂಡು ಹೀಗೆ-ಹೇಗೆ ಆಗಿದೆ ಎಂದು ವಿವರಿಗಸಿ ಹೇಳಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನನಗೆ ಘಟನೆಯ ಕುರಿತು ಯಾವುದೇ ಮಾಹಿತಿ ಇಲ್ಲಾ, ಪೋಲಿಸರು ಸಹಿ ಮಾಡು ಅಂತಾ ತಿಳಿಸಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು

ಅಫಜಲಪೂರ